

‘ಭಾಷೆಯ ಪ್ರಾಥಮಿಕ ಬಳಕೆಯಲ್ಲಿರುವ ತಪ್ಪನ್ನು ಸರಿಪಡಿಸಿದಾಗ ಮಾತ್ರ ‘ಎಐ’ ಕ್ಷೇತ್ರದ ಅಪಸವ್ಯವನ್ನು ನಿವಾರಿಸಬಹುದು. ಉದಾಹರಣೆಗೆ: ಗಂಡಿಗೆ ‘ಫ್ಯಾಮಿಲಿಮ್ಯಾನ್’ ಎಂಬ ವಿಶಾಲ ಅರ್ಥ ಸೂಚಿಸುವ ಪದ ಬಳಸುತ್ತೇವೆ. ಆದರೆ, ಹೆಣ್ಣಿಗೆ ‘ಫ್ಯಾಮಿಲಿವುಮನ್’ ಎನ್ನುವುದಿಲ್ಲ.

**-ಹೆಲೆನಾ ಮೋನಿಜ್**

ಲಿಸ್ಬನ್ ಯೂನಿವರ್ಸಿಟಿಯ ಭಾಷಾ ತಜ್ಞೆ

### ಹೆಣ್ಮಕ್ಕಳೇ ಸ್ಟ್ರಾಂಗು!

ಬಾಹ್ಯಾಕಾಶ ಸಂಶೋಧನೆ, ಯಾತ್ರೆ ಶುರುವಾದ ನಂತರ, ‘ಅದು ಗಂಡಸರಿಗೆ ಮಾತ್ರ’ ಎಂಬ ಅಲಿಖಿತ ನಿಯಮವಿತ್ತು. ಸಂಶೋಧಕಿಯರನ್ನು, ವಿಜ್ಞಾನಿಗಳನ್ನು ಉಪಗ್ರಹ ನಿರ್ಮಾಣ, ನೌಕೆಗಳ ಭಾಗ ಜೋಡಣೆ, ರಿಪೇರಿ ಕಾರ್ಯಕ್ಕೆ ಮಾತ್ರ ಬಳಸಿಕೊಳ್ಳಲಾಗುತ್ತಿತ್ತು.

ವಾಸ್ತವದಲ್ಲಿ ಮಹಿಳೆಯರ ಸಾಧಾರಣ ಎತ್ತರ, ಮೈಕಟ್ಟು ಮತ್ತು ತೂಕಗಳು ಬಾಹ್ಯಾಕಾಶದ ವಾತಾವರಣಕ್ಕೆ ತುಂಬಾ ಚೆನ್ನಾಗಿ ಹೊಂದಿಕೆಯಾಗುತ್ತವೆ ಎಂಬುದು ಸಂಶೋಧನೆಗಳಿಂದ ಸಾಬೀತಾಗಿದೆ. ‘ಗಂಡಸಿಗಿಂತ ಕಡಿಮೆ ತೂಕದ ಮಹಿಳೆಯರು ಬಾಹ್ಯಾಕಾಶದಲ್ಲಿ ಕಡಿಮೆ ಆಮ್ಲಜನಕ, ಆಹಾರ ಸೇವಿಸುತ್ತಾರೆ ಮತ್ತು ಅವರಿಗೆ ನಾಲಿಗೆ ಚಪಲ ಕಡಿಮೆಯಾದ್ದರಿಂದ, ಹೊಮ್ಮುವ ತ್ಯಾಜ್ಯವೂ ಅತ್ಯಲ್ಪ’ ಎಂದಿರುವ ಅಮೆರಿಕದ ಗಗನಯಾತ್ರಿ ಸ್ಯಾಲಿರೈಡ್, ‘ಬಾಹ್ಯಾಕಾಶದ ಕನಿಷ್ಠ ಗುರುತ್ವ ಮಹಿಳೆಗೆ ಹೇಳಿ ಮಾಡಿಸಿದಂತಿದೆ’ ಎಂದಿದ್ದಾರೆ.

ಅಧ್ಯಯನಗಳ ಪ್ರಕಾರ ಬಾಹ್ಯಾಕಾಶ ಯಾನ ಮತ್ತು ವಾಸ್ತವದಲ್ಲಿ ಪುರುಷರಿಗಿಂತ ಮಹಿಳೆಯರೇ ಮೇಲು ಎಂಬುದು ಶಾರೀರಿಕವಾಗಿ ಹಾಗೂ ಜೈವಿಕವಾಗಿ ಸಾಬೀತಾಗಿದೆ. ಪ್ರಕೃತಿಸಹಜ ಶಕ್ತಿಯಿಂದಾಗಿ ಮಹಿಳೆ ಗಗನನೌಕೆಗಳ ಕುಲುಕಾಟ, ಅತಿಯಾದ ಉಷ್ಣತೆಗಳನ್ನು ಸುಲಭವಾಗಿ ಸಹಿಸಿಕೊಳ್ಳುತ್ತಾಳೆ. ಬಾಹ್ಯಾಕಾಶ ವಿಕಿರಣ ಪುರುಷರ ಮೇಲೆ ಬೀರಿದಷ್ಟು ಪರಿಣಾಮವನ್ನು ಮಹಿಳೆಯರ ಮೇಲೆ ಉಂಟುಮಾಡುವುದಿಲ್ಲ. ಅಲ್ಲದೆ, ಬಾಹ್ಯಾಕಾಶದಲ್ಲಿರುವಾಗ ಗಂಡಸರು ಮಹಿಳೆಗಿಂತ ಹೆಚ್ಚು ಪ್ರಮಾಣದ ಕಬ್ಬಿಣದ ಅಂಶವನ್ನು ದೇಹದಲ್ಲಿ ಶೇಖರಿಸಿಕೊಂಡು, ಅದು ಅನೇಕ ಬಾರಿ ವಿಷವಾಗಿ ಪರಿಣಮಿಸಿದ್ದೂ ಇದೆ. ಮೂವತ್ತು, ನಲವತ್ತು ವಯಸ್ಸಿನ ಪುರುಷ ಗಗನಯಾತ್ರಿಗಳು ಬಾಹ್ಯಾಕಾಶಕ್ಕೆ ಹೋದಾಗ ಹೃದಯರೋಗದ ಮೊದಲ ಲಕ್ಷಣಗಳು ಗೋಚರಿಸುತ್ತವೆ ಎಂಬುದು ಅಧ್ಯಯನದಿಂದ ಬೆಳಕಿಗೆ ಬಂದಿದೆ. ಇದಕ್ಕೆ ಕಾರಣ ಪುರುಷರಲ್ಲಿರುವ ಈಸ್ಟ್ರೋಜೆನ್ ಹಾರ್ಮೋನ್‌ನ ಕೊರತೆ. ಇದು ಮಹಿಳೆಯರಲ್ಲಿ ಹೆಚ್ಚಿರುವುದರಿಂದ ಅವರಲ್ಲಿ ಹೃದಯದ ತೊಂದರೆಗಳು ಕಾಣಿಸಿಕೊಳ್ಳುವುದಿಲ್ಲ ಎಂಬುದು ತಜ್ಞರ ಮಾತು. ಇಷ್ಟೆಲ್ಲಾ ಅಂಶಗಳು ಬಾಹ್ಯಾಕಾಶ ಯಾತ್ರೆಗೆ ಮಹಿಳೆಯರೇ ಸೂಕ್ತ ಎಂದು ಸಾರಿ ಹೇಳುತ್ತಿದ್ದರೂ, ಪುರುಷ ಸಮಾಜದ ಅಹಂ ಮಾತ್ರ ಕಡಿಮೆಯಾಗದಿರುವುದು ವಿಪರ್ಯಾಸವೇ ಸರಿ.



ನಾವು ನಮ್ಮ ದಿನನಿತ್ಯದ ಅನುಕೂಲಗಳಿಗೆ ಬಳಸುವ ವರ್ಚುವಲ್ ಅಸಿಸ್ಟೆಂಟ್‌ಗಳು. ‘ಅವುಗಳಿಗೆ ಹೆಣ್ಣಿನ ಹೆಸರಿಡುವ ಮೂಲಕ, ತಂತ್ರಜ್ಞಾನ ಕ್ಷೇತ್ರದಲ್ಲೂ ಹೆಣ್ಣನ್ನು ಸೇವಕಿಯಂತೆ ಕಾಣಲಾಗಿದೆ; ದ್ವಿತೀಯ ದರ್ಜೆ ಸ್ಥಾನ ನೀಡಲಾಗಿದೆ’ ಎಂದು ಸಿಟ್ಟಿಗೆದ್ದಿರುವ ‘ಲಂಡನ್ ಯೂನಿವರ್ಸಿಟಿ’ಯ ಡಾ. ನೋರಾ ಲಾಯ್ಡೀನ್, ‘ಪ್ರವೃತ್ತಿಯನ್ನು ಮೊಗ್ಗಿನಲ್ಲೇ ಚಿವುಟಿ ಹಾಕಬೇಕು’ ಎಂದಿದ್ದಾರೆ. ಹೆಸರಷ್ಟೇ ಅಲ್ಲ, ಈ ಸಲಕರಣೆಗಳಿಗೆ ನೀಡಲಾಗಿರುವ ಧ್ವನಿಯೂ ಹೆಣ್ಣಿನದ್ದೇ.

‘ಸಾಮಾನ್ಯ ಜೀವನದಲ್ಲಿ ಹೆಣ್ಣನ್ನು ಕೀಳಾಗಿ ಕಂಡದ್ದು ಸಾಲದೆಂಬಂತೆ ಈಗ ಅತ್ಯಾಧುನಿಕ ತಂತ್ರಜ್ಞಾನದ ಕಾಲದಲ್ಲೂ ಪ್ರತಿಗಾಮಿ ಮನಸ್ಸುಗಳುಳ್ಳ ಕೆಲವರು ಬೇಕೆಂದೇ ಹೆಣ್ಣಿನ ಹೆಸರಿಟ್ಟು, ಲಿಂಗ ತಾರತಮ್ಯವನ್ನು ಪೋಷಿಸುತ್ತಿದ್ದಾರೆ. ಇದು ಪುರುಷ ಪ್ರಧಾನ ವ್ಯವಸ್ಥೆಯ ದಣಿವರಿಯದ ಅಹಂಕಾರವನ್ನು ಎತ್ತಿ ತೋರಿಸುತ್ತದೆ’ ಎನ್ನುವುದು ಡಾ. ನೋರಾ ಅವರ ಅಭಿಪ್ರಾಯ.

‘ನಮ್ಮ ಸಂಗಾತಿಗಳಿಗಿಂತ ವರ್ಚುವಲ್ ಸಾಧನಗಳೊಂದಿಗೆ ಮಾತನಾಡುವ ಸಮಯ ಹೆಚ್ಚಾಗಲಿದೆ’ ಎಂದಿರುವ ಯುನೆಸ್ಕೊ, ಮುಂಬರುವ ದಿನಗಳಲ್ಲಿ ‘ವರ್ಚುವಲ್ ಸಾಧನಗಳು ಎಲ್ಲೆಲ್ಲಿಯೂ ಇರಲಿವೆ’ ಎಂದು ಹೇಳಿದೆ. ಹಾಗಾದಲ್ಲಿ ಹೆಣ್ಣು ಶಾಶ್ವತವಾಗಿ ಸೇವಕಿಯಾಗಿಬಿಡುತ್ತಾಳೆ ಎಂದು ಹೇಳಿರುವ ಲಿಂಗ ತಾರತಮ್ಯ ವಿರೋಧಿ ಹೋರಾಟಗಾರರು,